# ಇನ್ನೂ ಎಷ್ಟುಕಾಲ ಕಾಯಬೇಕು



ಕಾಲುಶತಮಾನದ ಹಾದಿ ಮುಗಿದಿದೆ
ನಿನ್ನ ಕಾಯುವಿಕೆಯಲ್ಲಿ
ಪ್ರೇಮಕ್ಕೆ ಮುಪ್ಪಿಲ್ಲ ಎಂಬುದು ಸಾರ್ವಕಾಲಿಕ ಸತ್ಯ
ಗಡಿಯಾರಕ್ಕೆ ನಮ್ಮ ಪ್ರೇಮದ್ದೇ ಕಾಳಜಿ
ನೆನಪುಗಳನ್ನು ಹಾಗೆಯೇ ಉಳಿಸಿಕೊಂಡು ಹೋಗುತ್ತಿದೆ
ಬದುಕಿನ ಮೊಣಚು ಬಾಣಗಳಿಂದ ಕನಸುಗಳನ್ನು ರಕ್ಷಿಸುತ್ತಿದೆ

ನಿನ್ನ ಮೊದಲ ತೊದಲು ಇಷ್ಟವಾಗುವ ಹೊತ್ತಿಗೆ
ನೀನು ಬಲಿತ ಮಾತು ಹೇಳುವುದನ್ನು ಕಲಿತೆ
ನೆನಪಿಡು, ಬಲಿತಮಾತು ಪ್ರೇಮವನ್ನು ಬಲಿಕೊಡಬಹುದು

ಅರಳಬೇಕು ಹೂವಿನಂತೆ, ಅರಿಯಬೇಕು ಮಗುವಿನಂತೆ
ಅಪ್ಪಿಕೊಳ್ಳಬೇಕು ತಾಯಿಯಂತೆ, ಬದುಕಬೇಕು ಪ್ರೇಮಿಯಂತೆ
ನಿನ್ನ ಆರಂಭದ ಹೆಜ್ಜೆಗಳಿಗೆ ಪರಿಚಯವಿದೆ ಎಲ್ಲ
ನಂತರದ ಹೆಜ್ಜೆ ನಿನ್ನ ಪ್ರೇಮದ ವ್ಯಾಖ್ಯಾನ ಬದಲಿಸಿತು
ತಿಳಿದುಕೊ, ಪ್ರೇಮಕ್ಕೆ ಒಂದೇ ಅರ್ಥವಿದೆ
ಅದನ್ನೇ ಎಲ್ಲರೂ ಒಪ್ಪಿಕೊಳ್ಳಬೇಕು

ಪ್ರೇಮದ ಎಲ್ಲ ವಸ್ತುಗಳ ಮೇಲೂ ನನ್ನ ಹಕ್ಕಿದೆ
ನಿನ್ನ ಮೇಲೂ; ನಿನ್ನ ಹೃದಯಕ್ಕೆ ಆಗಾಗ ನನ್ನ
ಹೆಸರನ್ನು ನೆನಪಿಸುತ್ತಿರು
ಕೇಳು, ಮಾರಾಟವಾಗುವ ಎಲ್ಲಕ್ಕೂ ಅವಸಾನವಿದೆ
ನೀನು ವ್ಯಾಪಾರಕ್ಕಿಳಿಯಬೇಡ

ಇನ್ನೂ ಎಷ್ಟುಕಾಲ ಕಾಯಬೇಕು ಹೇಳು
ವಯಸ್ಸಿನ ಎಲ್ಲ ಸುಕ್ಕುಗಳಿಗೆ
ಹೃದಯದ ಎಲ್ಲ ಬಿಕ್ಕುಗಳಿಗೆ
ನಿನ್ನ ಹೆಸರಿನ ಮುಲಾಮು ಒರೆಸುತ್ತಿರುವೆ
ನಿತ್ಯ ಪ್ರೇಮದ ಕಷಾಯ ಕುಡಿಸುತ್ತಿರುವೆ

● **ನಾಗರಾಜ ಕಾಂಬಳೆ**

ಕಲೆ: ವಾಗೀಶ ಹೆಗಡೆ

